ಸತತವಾಗಿ ಬರಗಾಲಕ್ಕೆ ತುತ್ತಾಗುತ್ತಿರುವುದು

40 (175)

ಶ್ರೀ ಅಪ್ಪಾಜಿ @ ಚನ್ನಬಸವರಾಜ್ ಶಂಕರರಾವ್ ನಾಡಗೌಡ. (ಮುದ್ದೇಬಿಹಾಳ)

ಅ) ರಾಜ್ಯದಲ್ಲಿ ಬರಗಾಲಕ್ಕೆ ತುತ್ತಾಗಿರುವ ಒಟ್ಟು ತಾಲ್ಲೂಕುಗಳು ಯಾವುವು; (ವಿವರ ನೀಡುವುದು)

ಆ) ಪ್ರಸ್ತುತ ಬರಗಾಲವನ್ನು ನೀಗಿಸಲು ಬಿಡುಗಡೆ ಮಾಡಿರುವ ಅನುದಾನದ ಮೊತ್ತವೆಷ್ಟು;

ಇ) ಹಾಗಿದ್ದಲ್ಲಿ, ಇದುವರೆವಿಗೂ ಬರಗಾಲ ನೀಗಿಸಲು ವೆಚ್ಚವಾಗಿರುವ ಹಾಗೂ ಉಳಿಕೆಯಿರುವ ಅನುದಾನದ ಮೊತ್ತವೆಷ್ಟು;

ಈ) ಬಿಜಾಪುರ ಜಿಲ್ಲೆಯು ಸತತವಾಗಿ ಬರಗಾಲಕ್ಕೆ ತುತ್ತಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಉ) ಈ ಜಿಲ್ಲೆಯನ್ನು ಖಾಯಂ ಬರಗಾಲ ಜಿಲ್ಲೆಯೆಂದು ಘೋಷಣೆ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ;

ಊ) ಹಾಗಿದ್ದಲ್ಲಿ ಎಂದಿನಿಂದ ಘೋಷಣೆ ಮಾಡಲಾಗುವುದು?

ಡಿ.ವಿ. ಸದಾನಂದಗೌಡ (ಮುಖ್ಯಮಂತ್ರಿಗಳು)

ಅ) ಅನುಬಂಧದಲ್ಲಿ ನೀಡಲಾಗಿದೆ.

ಆ) ರೂ. 172.25 ಕೋಟಿ ಹಣವನ್ನು ಬರಗಾಲ ನೀಗಿಸಲು ಕಂದಾಯ ಇಲಾಖೆಯು ವಿಪತ್ತು ಪರಿಹಾರ ನಿಧಿಯಿಂದ ಬಿಡುಗಡೆ ಮಾಡಲಾಗಿದೆ.

ಇ) ಈವರೆಗೆ ಬರಗಾಲ ನೀಗಿಸಲು ರೂ. 87.18 ಕೋಟಿ ಹಣ ವೆಚ್ಚವಾಗಿದ್ದು, ಇನ್ನು ರೂ. 85.07 ಕೋಟಿ ಹಣ ಪ್ರಗತಿಯಲ್ಲಿರುವ ಕಾಮಗಾರಿಗಳಿಗೆ ಮೀಸಲಿಡಲಾಗಿದೆ.

ಈ) ಇಲ್ಲ

ಉ) ಕೇಂದ್ರ ಸರ್ಕಾರದ ಮಾರ್ಗಸೂಚಿಯನ್ವಯ ಆಯಾ ವರ್ಷದಲ್ಲಿ ಮಳೆ ಪ್ರಮಾಣ ಅನುಸಾರವಾಗಿ ಆಗಿಂದ್ದಾಗ್ಗೆ ಋತುಮಾನ ಪರಿಸ್ಥಿತಿಯ ಅನುಗುಣವಾಗಿ ಬರಗಾಲವೆಂದು ಘೋಷಿಸಲಾಗುತ್ತಿದೆ. ಮಾರ್ಗಸೂಚಿಯನ್ವಯ ಶಾಶ್ವತ ಬರಗಾಲ ಪೀಡಿತ ಜಿಲ್ಲೆಯೆಂದು ಘೋಷಿಸಲು ಸಾಧ್ಯವಿಲ್ಲ.

ಊ) ಉದ್ಭವಿಸುವುದಿಲ್ಲ.

ಶ್ರೀ ಅಪ್ಪಾಜಿ @ ಚನ್ನಬಸವರಾಜ್ ಶಂಕರರಾವ್ ನಾಡಗೌಡ (ಮುದ್ದೆಬಿಹಾಳ) ಮಾನ್ಯ ವಿಧಾನ ಸಭಾ ಸದಸ್ಯರು ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂ : 175 ಕ್ಕೆ ಅನುಬಂಧ :

2011–12ನೇ ಸಾಲಿನಲ್ಲಿ ಬರ ಎಂದು ಘೋಷಿಸಿದ ತಾಲ್ಲೂಕುಗಳ ಪಟ್ಟಿ

ಕ್ರ.ಸಂ.	ಜಿಲ್ಲೆ	ತಾಲ್ಲೂಕು	ಸಂಖ್ಯೆ
1	ರಾಮನಗರ	ಚನ್ನಪಟ್ಟಣ	03
		ಕನಕಪುರ	
		ಮಾಗಡಿ	
2	ಕೋಲಾರ	ಬಂಗಾರಪೇಟೆ	04
		ಕೋಲಾರ	
		ಶ್ರೀನಿವಾಸಪುರ	
		ಮುಳಬಾಗಿಲು	
3	ಚಿಕ್ಕಬಳ್ಳಾಪುರ	ಚಿಕ್ಕಬಳ್ಳಾಪುರ	06
		ಚಿಂತಾಮಣಿ	
		ಗೌರಿ ಬಿದನೂರು	
		ಬಾಗೇಪಲ್ಲಿ	
		ಗುಡಿಬಂಡೆ	
		ಶಿಡ್ಲಘಟ್ಟ	
4	ತುಮಕೂರು	ಕುಣಿಗಲ್	10
		ಮಧುಗಿರಿ	
		ಪಾವಗಡ	
		ಶಿರಾ	
		ತುಮಕೂರು	
		ಚಿಕ್ಕನಾಯಕನಹಳ್ಳಿ	
		ತಿಪಟೂರು	
		ಗುಬ್ಬಿ	
		ಕೊರಟಗೆರೆ	
		ತುರುವೇಕೆರೆ	
5	ಚಿತ್ರದುರ್ಗ	ಚಳ್ಳಕೆರೆ	06
		ಚಿತ್ರದುರ್ಗ	
		ಹೊಸದುರ್ಗ	
		ಮೊಳಕಾಲ್ಮೂರು	
		ಹಿರಿಯೂರು	
		ಹೊಳಲ್ಕೆರೆ	

ಕ್ರ.ಸಂ.	ಜಿಲ್ಲೆ	ತಾಲ್ಲೂಕು	ಸಂಖ್ಯೆ
6	ಚಾಮರಾಜನಗರ	ಚಾಮರಾಜನಗರ	04
		ಗುಂಡ್ಲುಪೇಟೆ	
		ಕೊಳ್ಳೇಗಾಲ	
		ಯಳಂದೂರು	
7	ಮೈಸೂರು	ಕೆ.ಆರ್.ನಗರ	05
		ನಂಜನಗೂಡು	
		ಟಿ. ನರಸೀಪುರ	
		ಪಿರಿಯಾಪಟ್ಟಣ	
		ಮೈಸೂರು	
8	ಮಂಡ್ಯ	ಕೃಷ್ಣರಾಜಪೇಟೆ	07
		ಮದ್ದೂರು	
		ಮಳವಳ್ಳಿ	
		ಮಂಡ್ಯ	
		ನಾಗಮಂಗಲ	
		ಪಾಂಡವಪುರ	
		ಶ್ರೀರಂಗಪಟ್ಟಣ	
9	ಬಳ್ಳಾರಿ	ಬಳ್ಳಾರಿ	07
		ಹೊಸಪೇಟೆ	
		ಹೆಚ್.ಬಿ.ಹಳ್ಳಿ	
		ಕೂಡ್ಲಿಗಿ	
		ಸಂಡೂರು	
		ಸಿರಗುಪ್ಪ	
		ಹಡಗಲಿ	
10	ಕೊಪ್ಪಳ	ಗಂಗಾವತಿ	04
		ಕೊಪ್ಪಳ	
		ಕುಷ್ಟಗಿ	
		ಯಲ್ಬುರ್ಗಾ	
11	ರಾಯಚೂರು	ದೇವದುರ್ಗ	05
		ಲಿಂಗಸಗೂರು	
		ಮಾನ್ವಿ	
		ರಾಯಚೂರು	
		ಸಿಂಧನೂರು	
12	ಗುಲ್ಬರ್ಗಾ	ಅಫ್‌ಜಲ್‌ಪುರ್	07
		ಆಳಂದ	
		ಚಿಂಚೋಳಿ	
		ಚಿತಾಪುರ	
		ಗುಲ್ಬರ್ಗಾ	
		ಜೇವರ್ಗಿ	
		ಸೇಡಂ	
13	ಯಾದಗಿರಿ	ಶಹಾಪುರ	03
		ಶೋರಾಪುರ	
		ಯಾದಗಿರಿ	

ಕ್ರ.ಸಂ.	ಜಿಲ್ಲೆ	ತಾಲ್ಲೂಕು	ಸಂಖ್ಯೆ
14	ಬೀದರ್	ಬೀದರ್	05
		ಔರಾದ್	
		ಬಾಲ್ಕಿ	
		ಬಸವಕಲ್ಯಾಣ	
		ಹುಮ್ನಾಬಾದ್	
15	ಬಾಗಲಕೋಟೆ	ಬೀಳಗಿ	06
		ಜಮಖಂಡಿ	
		ಮುಧೋಳ್	
		ಬಾದಾಮಿ	
		ಹುನಗುಂದ	
		ಬಾಗಲಕೋಟೆ	
16	ಬಿಜಾಪುರ	ಬಸವನಬಾಗೇವಾಡಿ	05
		ಬಿಜಾಪುರ	
		ಇಂಡಿ	
		ಸಿಂದಗಿ	
		ಮುದ್ದೆಬಿಹಾಳ	
17	ಗದಗ್	ಗದಗ	05
		ಮುಂಡರಗಿ	
		ರೋಣ	
		ಶಿರಹಟ್ಟಿ	
		ನರಗುಂದ	
18	ಧಾರವಾಡ	ನವಲಗುಂದ	04
		ಹುಬ್ಬಳ್ಳಿ	
		ಕುಂದಗೋಳ	
		ಧಾರವಾಡ	
19	ಹಾಸನ	ಅರಸೀಕೆರೆ	06
		ಚನ್ನರಾಯಪಟ್ಟಣ	
		ಹಾಸನ	
		ಹೊಳೆನರಸೀಪುರ	
		ಅರಕಲಗೂಡು	
		ಬೇಲೂರು	
20	ಚಿಕ್ಕಮಗಳೂರು	ಕಡೂರು	01
21	ಬೆಳಗಾಂ	ಅಥಣಿ	07
		ಸೌದತ್ತಿ	
		ಚಿಕ್ಕೋಡಿ	
		ರಾಮದುರ್ಗ	
		ಬೈಲಹೊಂಗಲ	
		ಹುಕ್ಕೇರಿ	
		ರಾಯಭಾಗ	
22	ದಾವಣಗೆರೆ	ಜಗಳೂರು	04
		ಹರಪನಹಳ್ಳಿ	
		ದಾವಣಗೆರೆ	
		ಹೊನ್ನಾಳಿ	

ಕ್ರ.ಸಂ.	ಜಿಲ್ಲೆ	ತಾಲ್ಲೂಕು	ಸಂಖ್ಯೆ
23	ಹಾವೇರಿ	ರಾಣಿಬೆನ್ನೂರು	07
		ಶಿಗ್ಗಾಂವ್	
		ಸವಣೂರು	
		ಹಿರೇಕೆರೂರ	
		ಬ್ಯಾಡಗಿ	
		ಹಾನಗಲ್	
		ಹಾವೇರಿ	
24	ಬೆಂಗಳೂರು ಗ್ರಾಮಾಂತರ	ದೇವನಹಳ್ಳಿ	02
		ದೊಡ್ಡಬಳ್ಳಾಪುರ	
	ಒಟ್ಟು		123

62 : (144)

ಶ್ರೀ ಕೃಷ್ಣಪ್ಪ. ಎಂ.ಟಿ. (ತುರುವೇಕೆರೆ)

ಅ) ರಾಜ್ಯದಲ್ಲಿ ಕಳೆದ ಮೂರು ವರ್ಷಗಳಿಂದ ನಿರಂತರ ಕ್ಷಾಮದಲ್ಲಿ ಮುಳುಗಿರುವ ತಾಲ್ಲೂಕುಗಳಾವುವು; ವರ್ಷಾವಾರು ಅನುಭವಿಸಿರುವ ನಷ್ಟದ ಅಂದಾಜಿನ ಮಾಹಿತಿಯನ್ನು ನೀಡುವುದು;

ಆ) ನಿರಂತರ ಕ್ಷಾಮವನ್ನು ಅನುಭವಿಸುತ್ತಿರುವ ತಾಲ್ಲೂಕುಗಳಿಗೆ ಸರ್ಕಾರ ಶಾಶ್ವತ ಯೋಜನೆಯನ್ನು ಕೈಗೊಂಡಿದೆಯೇ; ಹಾಗಿಲ್ಲದಿದ್ದಲ್ಲಿ ಕಾರಣಗಳೇನು;

ಇ) ಪ್ರತಿ ವರ್ಷ ಬರಗಾಲ ಪ್ರದೇಶಗಳಿಗೆ ಆಯವ್ಯಯದಲ್ಲಿ ಮೀಸಲಿಟ್ಟ ಹಣವೆಷ್ಟು; ಖರ್ಚು ಮಾಡಿದ ಹಣವೆಷ್ಟು? (ತಾಲ್ಲೂಕುವಾರು ಮಾಹಿತಿ ನೀಡುವುದು)

ಡಿ.ವಿ. ಸದಾನಂದಗೌಡ (ಮುಖ್ಯಮಂತ್ರಿಗಳು)

ಅ) 2009ನೇ ಸಾಲಿನಲ್ಲಿ 86 ತಾಲ್ಲೂಕುಗಳನ್ನು ಬರಗಾಲ ಪೀಡಿತ ತಾಲ್ಲೂಕುಗಳೆಂದು ಘೋಷಿಸಲಾಗಿರುತ್ತದೆ. 2010ನೇ ಸಾಲಿನಲ್ಲಿ ಯಾವುದೇ ತಾಲ್ಲೂಕುಗಳನ್ನು ಬರಗಾಲ ಪೀಡಿತ ಪ್ರದೇಶವೆಂದು ಘೋಷಿಸಿರುವುದಿಲ್ಲ. 2011ನೇ ಸಾಲಿನಲ್ಲಿ 123 ತಾಲ್ಲೂಕುಗಳನ್ನು ಬರಪೀಡಿತ ಪ್ರದೇಶಗಳೆಂದು ಘೋಷಿಸಲಾಗಿದೆ. ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

2009ನೇ ಸಾಲಿನಲ್ಲಿ ಬರದಿಂದ – ರೂ. 700.20 ಕೋಟಿ ನಷ್ಟವಾಗಿದೆ.

2011ನೇ ಸಾಲಿನಲ್ಲಿ ಬರದಿಂದ – ರೂ. 4544.84 ಕೋಟಿ ನಷ್ಟವಾಗಿದೆ.